ಮುಂಡರಗಿ ತಾಲ್ಲೂಕಿನಲ್ಲಿ ವಿದ್ಯುತ್ ವಿತರಣೆ ವ್ಯವಸ್ಥೆ:

91 (210) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನಲ್ಲಿ ವಿದ್ಯುತ್ ವಿತರಣೆ ವ್ಯವಸ್ಥೆ ಸರಿಯಿಲ್ಲದೆ ವೋಲ್ಟೇಜ್ ಬಾರದೇ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮವೇನು;

2) ಮುಂಡರಗಿ ಹಾಗೂ ಡಂಬಳ ಗ್ರಾಮಗಳಲ್ಲಿ 110 ಕೆ.ವಿ. ಪವರ್ ಸ್ಟೇಷನ್ನುಗಳ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಪೂರ್ಣಗೊಳಿಸಲಾಗುವುದು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಹೌದು ಬಂದಿದೆ.

ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನಲ್ಲಿನ ಸುಧಾರಣೆಗಾಗಿ ಮುಂಡರಗಿಯಲ್ಲಿ 110 ಕೆ.ವಿ.ಯ ಒಂದು ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಕೇಂದ್ರದ ಸ್ಥಾಪನೆಗೆ ನಿಗಮವು ಆಡಳಿತಾತ್ಮಕ ಅನುಮೋದನೆಯನ್ನು ಈಗಾಗಲೇ ನೀಡಿರುತ್ತದೆ. ಈ ಉಪ ಕೇಂದ್ರದ ಸ್ಥಾಪನೆಗೆ ತಗಲುವ ಅಂದಾಜು ವೆಚ್ಚ ರೂ. 792.35 ಲಕ್ಷಗಳು. ಇದಕ್ಕೆ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ ಸೌಲಭ್ಯವೂ ಸಹ ದೊರೆತಿರುತ್ತದೆ. ಪ್ರಸಕ್ತ ಸಾಲಾದ 2000-2001ಕ್ಕೆ ಈ ಕಾಮಗಾರಿಗೆ ರೂ. 100 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

2) ಮುಂಡರಗಿಯಲ್ಲಿ ಸ್ಥಾಪಿಸಲಾಗುವ 110. ಕೆ.ವಿ. ವಿದ್ಯುತ್ ಉಪ ಕೇಂದ್ರದ ಕೆಲಸವನ್ನು ನಿರ್ವಹಿಸಲು ಈಗಾಗಲೇ 'ಟರ್ನ್ ಕೀ' ಆಧಾರದ ಮೇಲೆ ಕಾರ್ಯ ಕೈಗೊಳ್ಳಲು ಟೆಂಡರನ್ನು ಸ್ವೀಕರಿಸಲಾಗಿದ್ದು ಇದರ ಮೌಲ್ಯೀಕರಣದ ಕೆಲಸವು ಮುಕ್ತಾಯದ ಹಂತಕ್ಕೆ ಬಂದಿದ್ದು, ಕಾಮಗಾರಿಗಳನ್ನು ಅವಾರ್ಡ್ ಮಾಡಿದ ನಂತರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು. ಕೆಲಸ ಕೈಗೆತ್ತಿಕೊಂಡ ನಂತರದ ಒಂದು ಅಥವಾ ಒಂದೂವರೆ ವರ್ಷದ ಅವಧಿಯಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ. ಡಂಬಳ ಗ್ರಾಮದಲ್ಲಿಯೂ ಸಹ 110 ಕೆ.ವಿ. ವಿದ್ಯುತ್ ಕೇಂದ್ರ ಸ್ಥಾಪನೆಗೆ ನಿಗಮವು ಆಡಳಿತಾತ್ಮಕ ಅನುಮೋದನೆಯನ್ನು ಈಗಾಗಲೇ ನೀಡಿರುತ್ತದೆ. ಸ್ಟೇಷನ್ ಮತ್ತು ಲೈನ್‌ಗಳ ಕಾಮಗಾರಿಗಳಿಗಾಗಿ ಅಂದಾಜು ಪತ್ರಿಕೆಗಳನ್ನೂ ಸಿದ್ಧಗೊಳಿಸಲಾಗುತ್ತಿದೆ. ಅಂದಾಜು ಪತ್ರಿಕೆಗಳು ಅನುಮೋದನೆಯಾದ ನಂತರ ಟೆಂಡರುಗಳನ್ನು ಆಹ್ವಾನಿಸಿ ಕಾಮಗಾರಿಯನ್ನು 'ಟರ್ನ್ ಕೀ' ಆಧಾರದ ಮೇಲೆ ಅವಾರ್ಡ್ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು. ಕೆಲಸ ಕೈಗೆತ್ತಿಕೊಂಡ ನಂತರದ ಒಂದು ಅಥವಾ ಒಂದೂವರೆ ವರ್ಷದ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.